ದಿನಾಂಕ:09-09-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

ವಿಷಯದ ಸಂಖ್ಯೆ:94/2010-11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೌಕರರ ವೃಂದ ಮತ್ತು ನೇಮಕಾತಿ ನಿಯಮ 1971 ರಲ್ಲಿ ರಚಿತವಾಗಿದ್ದು, ಇದನ್ನು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ತಿದ್ದುಪಡಿ ಮಾಡಿ, ಬೃಹತ್ ಮುಂಬೈ ಮಹಾನಗರ ಪಾಲಿಕೆಯಲ್ಲಿರುವಂತೆ ಸಿಬ್ಬಂದಿ ಶಾಖೆಯನ್ನು (Personnel Section) ಪ್ರಾರಂಭಿಸಿ, Centralised Establishment ಅನ್ನು ಜಾರಿಗೆ ತರಲು ತೀರ್ಮಾನಿಸಲಾಗಿದೆ. ಇದರಿಂದ ಅಧಿಕಾರಿಗಳು ಮತ್ತು ನೌಕರರಿಗೆ ಕಾಲ ಕಾಲಕ್ಕೆ ಸಿಗಬೇಕಾದ ವೇತನ ಬಡ್ತಿ, ಬಡ್ತಿಗಳನ್ನು ನೀಡಲು ತಡವಾಗುವುದಿಲ್ಲ ಹಾಗೂ ನಿವೃತ್ತಿಯ ದಿನದಂದೇ, ನಿವೃತ್ತಿ ವೇತನ ನೀಡಲು ಅನುಕೂಲವಾಗುತ್ತದೆ. ಇದರ ಜೊತೆಗೆ ನಗರಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರ ಮಾಹಿತಿಯನ್ನು ಪಡೆಯಲು ವಿಳಂಬವಾಗುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ಹೊಸದಾಗಿ ಹುದ್ದೆಗಳನ್ನು ಸೃಷ್ಟಿಸಲು ಸರ್ಕಾರಕ್ಕೆ ಕೋರಲಾಗಿದ್ದು, ಇವುಗಳಲ್ಲಿ 1106 ಹುದ್ದೆಗಳು ಮಾತ್ರ ಮಂಜೂರಾತಿಯಾಗಿದ್ದು, ಉಳಿದ ಹುದ್ದೆಗಳ ಮಂಜೂರಾತಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ನೌಕರರಿಗೆ ಮೂರು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ವರ್ಗಾವಣೆ ಜಾರಿಗೆ ತರಲಾಗುವುದು. ಅವಶ್ಯವಿರುವ ತರಬೇತಿಗಳನ್ನು ನೀಡಲು ಕ್ರಮ ತೆಗೆದುಕೊಳ್ಳುವುದು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೌಕರರ ವೃಂದ ಮತ್ತು ನೇಮಕಾತಿ ನಿಯಮ 1971 ರಲ್ಲಿ ರಚಿತವಾಗಿದ್ದು, ಇದನ್ನು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ತಿದ್ದುಪಡಿ ಮಾಡಿ, ಬೃಹತ್ ಮುಂಬೈ ಮಹಾನಗರ ಪಾಲಿಕೆಯಲ್ಲಿರುವಂತೆ ಸಿಬ್ಬಂದಿ ಶಾಖೆಯನ್ನು (Personnel Section) ಪ್ರಾರಂಭಿಸಿ, Centralised Establishment ಅನ್ನು ಜಾರಿಗೆ ತರಲು ತೀರ್ಮಾನಿಸಲಾಗಿದೆ. ಇದರಿಂದ ಅಧಿಕಾರಿಗಳು ಮತ್ತು ನೌಕರರಿಗೆ ಕಾಲ ಕಾಲಕ್ಕೆ ಸಿಗಬೇಕಾದ ವೇತನ ಬಡ್ತಿ, ಬಡ್ತಿಗಳನ್ನು ನೀಡಲು ತಡವಾಗುವುದಿಲ್ಲ ಹಾಗೂ ನಿವೃತ್ತಿಯ ದಿನದಂದೇ, ನಿವೃತ್ತಿ ವೇತನ ನೀಡಲು ಅನುಕೂಲವಾಗುತ್ತದೆ. ಇದರ ಜೊತೆಗೆ ನಗರಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರ ಮಾಹಿತಿಯನ್ನು ಪಡೆಯಲು ವಿಳಂಬವಾಗುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ಹೊಸದಾಗಿ ಹುದ್ದೆಗಳನ್ನು ಸೃಷ್ಟಿಸಲು ಸರ್ಕಾರಕ್ಕೆ ಕೋರಲಾಗಿದ್ದು, ಇವುಗಳಲ್ಲಿ 1106 ಹುದ್ದೆಗಳು ಮಾತ್ರ ಮಂಜೂರಾತಿಯಾಗಿದ್ದು, ಉಳಿದ ಹುದ್ದೆಗಳ ಮಂಜೂರಾತಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ನೌಕರರಿಗೆ ಮೂರು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ವರ್ಗಾವಣೆ ಜಾರಿಗೆ ತರಲಾಗುವುದು. ಅವಶ್ಯವಿರುವ ತರಬೇತಿಗಳನ್ನು ನೀಡಲು ಕ್ರಮ ತೆಗೆದುಕೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು